# ಭಗವಂತನು ಹೇಗೆ ಬರುವನು ಒಳಗೆ?

ಕಲೆ ಮತ್ತು ಸಾಹಿತ್ಯ

ಪುರುಷೋತ್ತಮ ಕಾರಂತ



**ಅವನೊಬ್ಬ** ಝೆನ್ ಗುರು.
ಬಂದನಂದೊಬ್ಬ ಸಾಧಕ ಭಕುತ ಬಳಿಗೆ
ಆತುರದಿ ಅವನೆಂದ,
"ಗುರುವೆ, ಭಗವಂತನ ಕುರಿತೆನಗೆ ಹೇಳಿ"ರೆಂದು.
ಚಹವ ತರಿಸಿದನು ಗುರು
ಇಬ್ಬರಿಗೂ ಎಂದಿನಂತೆ.

"**ನೋಡು,** ಇದೀಗ ಮೊದಲು ಚಹ
ಬಳಿಕ ಭಗವಂತನ ಕುರಿತು ಮಾತು"— ಗುರುವೆಂದ.
ಬಳಿಯೊಳಿಹ ಶಿಷ್ಯನ ಚಹದ ಬಟ್ಟಲಿಗೆ
ಸುರಿಯುತಿದ್ದನು ಗುರುವು–ದಾನಿಯಿಂದ,
ಮೌನದಿಂದ–

**ಬಟ್ಟಲು** ತುಂಬಿತು–ತುಳುಕಿತ್ತು
ಚಹ ಹೊರಗೆ ಚೆಲ್ಲುತಿತ್ತು!
ಶಿಷ್ಯ ನೋಡುತಲಿದ್ದ–
ಗುರುವು ಮತ್ತೆ ಚಹವ ಸುರಿಯುತ್ತಿದ್ದ.
ಅಚ್ಚರಿಯಲಿ ಶಿಷ್ಯನೆಂದ

"ಬಟ್ಟಲು ತುಂಬಿತಲ್ಲ —ಇನ್ನು ಸುರಿಯಲು ಸಲ್ಲ
ಬಟ್ಟಲು ತುಂಬಿರುವಾಗ! "

"**ಇನ್ನು** ಸೇರದು ಚಹ, ಇದು ನಿನ್ನ ತವಕ
ಸರಿ, ಮನದಿ ತುಂಬಿರೆ ಜಗದ ನೂರಾರು
ವಿಷಯಗಳು
ಭಗವಂತನೆಂತು ಬರುವನು ಒಳಗೆ?"
ಗುರುವೆಂದ ಶಾಂತನಾಗಿ
ಮೊದಲದಿನ ಪಾಠವಾಗಿ.

**ಭಗವಂತನು** ನಮ್ಮೊಳಗೆ ಬರಲೇಬೇಕಾದರೆ, ಅಲ್ಲಿ ಈಗಾಗಲೆ ತುಂಬಿಕೊಂಡಿರುವ ಈ ಪ್ರಾಪಂಚಿಕ ಸರಕು ಸರಂಜಾಮುಗಳೆಲ್ಲ ಖಾಲಿಯಾಗಬೇಕು. ಈಗಂತೂ ಭಗವಂತನಿಗೆ ನಮ್ಮೊಳಗೆ ಒಂದು ಹೆಜ್ಜೆಯಿಡಲೂ ಜಾಗವಿಲ್ಲ. ಅವನು ಬಾಗಿಲಲ್ಲೇ ಕಾಯುತ್ತಿರಬಹುದು. ಬೆಳಿಗ್ಗೆ ನಿದ್ರೆಯಿಂದ ಎದ್ದ ಕ್ಷಣದಿಂದಲೇ ನಾವು ಪ್ರಪಂಚದ ವಿಷಯಗಳನ್ನು ತುಂಬಿಕೊಳ್ಳಲು ತೊಡಗುತ್ತೇವೆ.